# ವಾಣಿಜ್ಯ ತೆರಿಗೆಗಳ ಇಲಾಖೆ

## 1ನೇ ಏಪ್ರಿಲ್, 2015 ರಿಂದ ವಾಣಿಜ್ಯ ತೆರಿಗೆಗಳಲ್ಲಿ ಜಾರಿಗೆ ಬರಲಿರುವ ಮುಖ್ಯ ಬದಲಾವಣೆಗಳು

**I. ಮೌಲ್ಯವರ್ಧಿತ ತೆರಿಗೆ:**

**1.** ಈ ಮುಂದಿನ ಸರಕುಗಳನ್ನು 1.4.2015 ರಿಂದ 31.3.2016ರವರೆಗೆ ತೆರಿಗೆಯಿಂದ ವಿನಾಯಿತಿಗೊಳಿಸಿದೆ:

(1) ಭತ್ತ, ಅಕ್ಕಿ ಮತ್ತು ಗೋಧಿ.

(2) ಬೇಳೆಕಾಳುಗಳು.

(3) ಅಕ್ಕಿ ಮತ್ತು ಗೋಧಿಯ ಹಿಟ್ಟು ಮತ್ತು ರವೆ ಮತ್ತು ಗೋಧಿಯ ಮೈದಾ ಹಿಟ್ಟು.

**2.** ಈ ಮುಂದಿನ ಸರಕುಗಳನ್ನು 1.4.2015 ರಿಂದ ತೆರಿಗೆಯಿಂದ ವಿನಾಯಿತಿಗೊಳಿಸಿದೆ:

(1) ಐದು ನೂರು ರೂಪಾಯಿಗಳಿಗೆ ಒಳಪಟ್ಟ ಪಾದರಕ್ಷೆ.

(2) ಬಾಳೆ ನಾರು ಮತ್ತು ಇತರೆ ಕೃಷಿ ತ್ಯಾಜ್ಯಗಳ ನೈಸರ್ಗಿಕ ನಾರನ್ನು ಬಳಸಿ ಕೈಯಿಂದ ತಯಾರಿಸಿದ ವಸ್ತುಗಳಾದ ಫ್ಲೋರ್ ಮ್ಯಾಟ್, ಟೇಬಲ್ ಮ್ಯಾಟ್ ಮತ್ತು ರನ್ನರ್, ಯುಟಿಲಿಟಿ ಕೈಚೀಲಗಳು ಮತ್ತು ಅಲಂಕಾರಿಕ ವಸ್ತುಗಳು (ರಬ್ಬರೈಸ್ಡ್ ವಸ್ತುಗಳನ್ನು ಹೊರತುಪಡಿಸಿ).

**3.** ಈ ಮುಂದಿನ ಸರಕುಗಳ ಮೇಲಿನ ತೆರಿಗೆಯನ್ನು ಶೇ.5.5ಕ್ಕೆ ಇಳಿಸಲಾಗಿದೆ:

(1) ಸೀಮೆಎಣ್ಣೆ ಬತ್ತಿ ಸ್ಟವ್‌ಗಳು.

(2) ಎಂ–ಸ್ಯಾಂಡ್ (ತಯಾರಿಸಿದ ಮರಳು).

(3) ಮೊಹರಾದ ಪ್ಯಾಕಿಂಗ್‌ನಲ್ಲಿ ಮೊಬೈಲ್ ಫೋನ್ ಜೊತೆಯಲ್ಲಿ ಮಾರಾಟವಾಗುವ ಮೊಬೈಲ್ ಫೋನ್ ಚಾರ್ಜರ್‌ಗಳು ಅಥವಾ ಪ್ರತ್ಯೇಕವಾಗಿ ಮಾರಾಟವಾಗುವ ಮೊಬೈಲ್ ಫೋನ್ ಚಾರ್ಜರ್‌ಗಳು.

**4.** ಈ ಮುಂದಿನ ಸರಕುಗಳನ್ನು ಬಂಡವಾಳ ಸರಕು /ಕೈಗಾರಿಕಾ ಹೂಡುವಳಿಗಳು /ಪ್ಯಾಕಿಂಗ್ ಸರಕುಗಳೆಂದು ಅಧಿಸೂಚಿಸಿ ಅವುಗಳ ಮೇಲೆ ತೆರಿಗೆಯನ್ನು ಶೇ.5.5ಕ್ಕೆ ಇಳಿಸಲಾಗಿದೆ:

(1) ಎಂ–ಸ್ಯಾಂಡ್ ತಯಾರಿಕೆಗೆ ಬೇಕಾದ ಯಂತ್ರೋಪಕರಣ.

(2) ಪ್ಯಾಲೆಟ್ಸ್, ಬಾಕ್ಸ್ ಪ್ಯಾಲೆಟ್ಸ್ ಮತ್ತು ಇತರೆ ಲೋಡ್ ಬೋರ್ಡ್, ಪ್ಯಾಲೆಟ್‌ಕಾಲರ್.

(3) ಪ್ರಿ–ಸೆನ್ಸಿಟೈಸ್ಡ್ ಲಿಥೊಗ್ರಾಫಿಕ್ ಪ್ಲೇಟ್.

(4) ಇಂಡಸ್ಟ್ರಿಯಲ್ ಕೇಬಲ್‌ಗಳು ಅಂದರೆ ಹೈ ವೋಲ್ಟೇಜ್ ಕೇಬಲ್, ಎಕ್ಸ್‌ಎಲ್‌ಪಿಇ ಕೇಬಲ್, ಜೆಲ್ಲಿ ಫಿಲ್ಡ್ ಕೇಬಲ್, ಆಪ್ಟಿಕಲ್‌ಫೈಬರ್ ಕೇಬಲ್ ಮತ್ತು ಪಿವಿಸಿ ಕೇಬಲ್.

**5.** ಸಿಗರೇಟ್, ಸಿಗಾರ್, ಗುಟ್ಕಾ ಮತ್ತು ಇತರೆ ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆ ದರವನ್ನು ಶೇ.17 ರಿಂದ ಶೇ.20ಕ್ಕೆ ಹೆಚ್ಚಿಸಲಾಗಿದೆ:

**6.** ಇತರೆ ಪರಿಹಾರಗಳು:

(1) ನೋಂದಣಿ ಮಿತಿಯನ್ನು ಪ್ರಸ್ತುತ 7.5 ಲಕ್ಷರೂಗಳ ವಾರ್ಷಿಕ ತೆರಿಗೆದಾಯಕ ವಹಿವಾಟಿನಿಂದ 10.00 ಲಕ್ಷ ರೂಗಳಿಗೆ ಹೆಚ್ಚಿಸಲಾಗಿದೆ.

(2) ಒಂದೇ ಆರ್ಥಿಕ ವರ್ಷದ ಹಲವಾರು ತೆರಿಗೆ ಅವಧಿಗಳಿಗೆ ಮಾಡಿದ ಮರು ಕರನಿರ್ಧಾರಣೆಗಳ ಮೇಲೆ ಒಂದೇ ಪ್ರಥಮ ಮೇಲ್ಮನವಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಿದೆ.

(3) ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಮುಂದೆ ಸಲ್ಲಿಸಿದ ಮನವಿಯನ್ನು ಇತ್ಯರ್ಥಗೊಳಿಸಲು ತಡೆಯಾಜ್ಞೆ ಜಾರಿಗೆ ಬಂದ ದಿನಾಂಕದಿಂದ ಪ್ರಸ್ತುತ ಇರುವ 180 ದಿನಗಳಿಂದ 365 ದಿನಗಳಿಗೆ ಏರಿಸಿದೆ.

(4) ಹಿಂದಿನ ತೆರಿಗೆ ಅವಧಿಯಲ್ಲಿ ಕ್ಲೇಮು ಮಾಡದೇ ಇದ್ದ ಹೂಡುವಳಿ ತೆರಿಗೆ ರಿಯಾಯಿತಿಯನ್ನು ತದನಂತರದ ತಿಂಗಳಲ್ಲಿ ಸಲ್ಲಿಸುವ ಮಾಸಿಕ ವರದಿಯಲ್ಲಿ ಕ್ಲೇಮು ಮಾಡಲು ಅನುವಾಗುವಂತೆ ಪ್ರಕರಣ 10ರ ಉಪಪ್ರಕರಣ(3)ಕ್ಕೆ ತಿದ್ದುಪಡಿ.

(5) ವಿಶೇಷ ಲೆಕ್ಕಾಚಾರ ಯೋಜನೆಗೆ (ಸ್ಪೆಷಲ್‌ಅಕೌಂಟಿಂಗ್ ಸ್ಕೀಂ) ಕಾಲಮಿತಿಯಲ್ಲಿ ಅನುಮತಿ ನೀಡುವುದು"ಸಕಾಲ" ವ್ಯಾಪ್ತಿಗೆ.

(6) ಯಾವುದೇ ಆದೇಶ ಅಥವಾ ನಡಾವಳಿಗಳ ವಿರುದ್ಧ ಪ್ರಥಮ ಮೇಲ್ಮನವಿ ಪ್ರಾಧಿಕಾರಕ್ಕೆ ವಿದ್ಯುನ್ಮಾನ ವ್ಯವಸ್ಥೆ ಮೂಲಕ ಮನವಿ ಸಲ್ಲಿಸಲು ಮತ್ತು ಮನವಿ ಆದೇಶ ಪಡೆಯಲು ಅವಕಾಶ.

(7) ಕೇಂದ್ರ ಮಾರಾಟ ತೆರಿಗೆ ಕಾಯ್ದೆ ಅನ್ವಯ ಶಾಸನಬದ್ಧ ನಮೂನೆಗಳನ್ನು ವಿದ್ಯುನ್ಮಾನ ವ್ಯವಸ್ಥೆ ಮೂಲಕ ಸಲ್ಲಿಸಲು ಮತ್ತು ವರ್ತಕರು ಘೋಷಿಸಿದ ವಹಿವಾಟಿಗೆ ಸಂಬಂಧ ಕಲ್ಪಿಸಲು ಕ್ರಮ.

**7.** 2003ರ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿಯಲ್ಲಿ ಮಾಡಿರುವ ಇತರೆ ಮುಖ್ಯ ಬದಲಾವಣೆಗಳು:

(1) ಖರೀದಿ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟವಾಗುವ ಸರಕುಗಳ ಮೇಲಿನ ಹೂಡುವಳಿ ತೆರಿಗೆ ರಿಯಾಯಿತಿಯನ್ನು ಹುಟ್ಟುವಳಿ ತೆರಿಗೆಗೆ ಮಿತಿಗೊಳಿಸುವುದು.

(2) ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಇನ್ನಾವುದೇ ಅಧಿಸೂಚಿತ ಸಂಸ್ಥೆಯು ಖರೀದಿ ಮಾಡಿದ ಸರಕಿನ ಮೇಲೆ ಹಣ ಪಾವತಿ ಮಾಡುವಾಗ ಅನ್ವಯವಾಗುವ ತೆರಿಗೆ ದರದಲ್ಲಿ, ಅಧಿಸೂಚಿತ ದಿನಾಂಕದಿಂದ ತೆರಿಗೆಯನ್ನು ಮೂಲದಲ್ಲಿ ಕಟಾವು ಮಾಡಿ ಸರ್ಕಾರಕ್ಕೆ ಪಾವತಿಸುವುದು.

**II. ಮಾರಾಟ ತೆರಿಗೆ:**

(1) ಡೀಸೆಲ್ ಮೇಲಿನ ತೆರಿಗೆ ದರವನ್ನು ಶೇ.15.65 ರಿಂದ ಶೇ.16.65ಕ್ಕೆ ಏರಿಕೆ ಮಾಡಲಾಗಿದೆ.

(2) ಪೆಟ್ರೋಲ್‌ಮೇಲಿನ ತೆರಿಗೆ ದರವನ್ನು ಶೇ.25 ರಿಂದ ಶೇ.26ಕ್ಕೆ ಏರಿಕೆ ಮಾಡಲಾಗಿದೆ.

**III. ವೃತ್ತಿ ತೆರಿಗೆ:**

(1) 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ವೃತ್ತಿ ತೆರಿಗೆಯಿಂದ ವಿನಾಯಿತಿ.

(2) 15,000/- ರೂ.ಗಳಿಗಿಂತ ಕಡಿಮೆ ಮಾಸಿಕ ಸಂಬಳ ಪಡೆಯುವ ವ್ಯಕ್ತಿಗಳಿಗೆ ವೃತ್ತಿ ತೆರಿಗೆಯಿಂದ ವಿನಾಯಿತಿ.

**IV. ಕೃಷಿ ವರಮಾನ ತೆರಿಗೆ:**

ರೀ–ಪ್ಲಾಂಟಿಂಗ್ ಅಲೋಯನ್ಸ್ ಪ್ರಸ್ತುತ ಒಂದು ಮೆಟ್ರಿಕ್ ಟನ್ ಕಾಫಿ ಉತ್ಪಾದನೆಗೆ 900/- ರೂ.ಗಳಿಂದ 2,050/- ರೂ.ಗಳಿಗೆ ಏರಿಕೆ.

ತಿದ್ದುಪಡಿಗಳು ಮತ್ತು ಅಧಿಸೂಚನೆಗಳ ಹೆಚ್ಚಿನ ವಿವರಗಳಿಗೆ ಇಲಾಖಾ ವೆಬ್‌ಸೈಟ್ http://ctax.kar.nic.in ಗೆ ದಯವಿಟ್ಟು ಭೇಟಿ ನೀಡಿ.

**ಉದ್ದೇಶಿತ ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆಗೆ ಸುಗಮವಾಗಿ ಸ್ಥಿತ್ಯಂತರಗೊಳ್ಳಲು ಎಲ್ಲಾ ವರ್ತಕರು ಇ–ಉಪಾಸ್ ಸೌಲಭ್ಯ ಉಪಯೋಗಿಸುವುದು ಮತ್ತು ವ್ಯಾಪಾರದ ಪ್ಯಾನ್, ಇ–ಮೇಲ್ ಐ.ಡಿ ಮತ್ತು ಮೊಬೈಲ್ ಸಂಖ್ಯೆಯನ್ನು ಇಲಾಖೆಗೆ ಒದಗಿಸಲು ಕೋರಲಾಗಿದೆ**

ರಿತ್ವಿಕ ಪಾಂಡೆ
ವಾಣಿಜ್ಯ ತೆರಿಗೆಗಳ ಆಯುಕ್ತರು.